## 4. ಕೌಶಲ್ಯಾಭಿವೃದ್ಧಿಗೆ ಮೋದಿ 3 ಮಂತ್ರ

ನಾವು ಇಂದಿನ ಕಾಲಕ್ಕೆ ತಕ್ಕಂತೆ ಪ್ರಸ್ತುತವಾಗಿರಬೇಕು ಎಂದರೆ ಕೌಶಲ್ಯ, ಮರುಕೌಶಲ್ಯ ಹಾಗೂ ಉನ್ನತ ಕೌಶಲ್ಯ ಅಳವಡಿಸಿಕೊಳ್ಳಬೇಕು. ಇದೇ ಪ್ರಸ್ತುತತೆಯ ಮಂತ್ರ ಎಂದು ಪ್ರಧಾನಿ ನರೇಂದ್ರ ಮೋದಿ ಯುವಕರಿಗೆ 'ಕೌಶಲ್ಯದ 3 ಮಂತ್ರಗಳ' ಕರೆ ನೀಡಿದ್ದಾರೆ. ಅದರಲ್ಲೂ ಕೊರೋನಾ ಪಿಡುಗಿನ ಸಂದರ್ಭದಲ್ಲಂತೂ ಇದರ ಅವಶ್ಯಕತೆ ಇನ್ನೂ ಹೆಚ್ಚಾಗಿದೆ.

ಸರ್ಕಾರದ ಮಹಾತ್ವಾಕಾಂಕ್ಷಿ 'ಕೌಶಲ್ಯ ಭಾರತ ಆಂದೋಲನ'ಕ್ಕೆ 5 ವರ್ಷ ಸಂದ ಹಿನ್ನೆಲೆಯಲ್ಲಿ ವಿಡಿಯೋ ಲಿಂಕ್ ಮೂಲಕ ಭಾಷಣ ಮಾಡಿದ ಅವರು ಕೌಶಲ್ಯ ಎಂಬುದಕ್ಕೆ ಯಾವುದೇ ಕಾಲಮಿತಿ ಇಲ್ಲ. ಅದು ಕಾಲಾತೀತ. ನಿರಂತರ. ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಅಳವಡಿಸಿಕೊಳ್ಳಬೇಕು. ಇದು ಇತರರಿಗಿಂತ ನಿಮ್ಮನ್ನು ವಿಭಿನ್ನವಾಗಿಸುತ್ತದೆ. ಇಂದು ವಿಶ್ವ ತೀವ್ರಗತಿಯಲ್ಲಿ ಬದಲಾಗುತ್ತಿದೆ. ಲಕ್ಷಾಂತರ ಕುಶಲ ಜನರ ಆಗತ್ಯವಿದೆ. ಅದರಲ್ಲೂ ಆರೋಗ್ಯ ಕ್ಷೇತ್ರಕ್ಕಂತೂ ಬಹಳಷ್ಟು ಕುಶಲಮತಿಗಳ ಅಗತ್ಯವಿದೆ. ಇದೇ ವೇಳೆ ವಾಣಿಜ್ಯ ನೌಕೆ ವಲಯವೂ ಇಂದು ಅತ್ಯಂತ ಬೇಡಿಕೆಯ ಕ್ಷೇತ್ರ, ನಾವು ಈ ಕ್ಷೇತ್ರದಲ್ಲಿ ಕೌಶಲ್ಯವನ್ನು ವೃದ್ದಿಸಿಕೊಳ್ಳುವತ್ತ ಕೆಲಸ ಮಾಡಿದರೆ, ಲಕ್ಷಾಂತರ ನೌಕಾ ತಜ್ಞರನ್ನು ಕೊಡುಗೆಯಾಗಿ ವಿಶ್ವಕ್ಕೆ ನೀಡಬಹುದು. ಕೊರೋನಾ ಬಿಕ್ಕಟ್ಟಿನಿಂದ ಉದ್ಯೋಗ ಕ್ಷೇತ್ರದ ಗುಣಲಕ್ಷಣಗಳೇ ಬದಲಾಗಿದೆ. ಕೆಲಸದ ಸಂಸ್ಕೃತಿ ಬದಲಾಗಿದೆ ಎಂದು ಹೇಳಿದ್ದಾರೆ.

ಆಧಾರ:ಕನ್ನಡ ಪ್ರಭ, ದಿನಾಂಕ:16.07.2020